ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ.ಮಂಗಳೂರು.ದಕ್ಷಿಣ ಕನ್ನಡ ಜಿಲ್ಲೆ.

ಎ4/ಸ.ಪ್ರಾ/ಎನ್,ಸಿ.ಎಫ್-2005/ ಸ.ವಿ..ಪೋ.ಪೇ./2011 ದಿನಾಂಕ 18-08-2011

ರಿಗೆ,

ಶ್ರೀ ರಾಮ ಕುಮಾರ್
ಸಿ-ಲ್ಯಾಂಪ್ಸ್ ಬೆಂಗಳೂರು.

ಮಾನ್ಯರೇ,

ವಿಷಯ ; ಎನ್,ಸಿ.ಎಫ್-2005 ನ ಸಮಾಜ ವಿಜ್ಞಾನ ಪೋಸಿಷನ್ ಪೇಪರ್ ನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡಿದ್ದನ್ನು ತಮಗೆ ಕಳುಹಿಸುವ ಬಗ್ಗೆ,

ಮೆಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಾವು ನಮ್ಮ ಕಾರ್ಯಾಗಾರದಲ್ಲಿ ಭಾಷಾಂತರಿಸಿದ ಎನ್,ಸಿ.ಎಫ್-2005 ನ ಸಮಾಜ ವಿಜ್ಞಾನ ಪೋಸಿಷನ್ ಪೇಪರ್ ನ್ನು ತಮಗೆ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ

ಸಹಿ/

ಉಪನಿರ್ದೇಶಕರು(ಅಭಿವೃದ್ದಿ)
ಹಾಗೂ ಪ್ರಾಂಶುಪಾಲರು ಡಯಟ್

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಗಳೂರು**

**ಎನ್.ಸಿ.ಎಫ್.-2005 - ಸಮಾಜ ವಿಜ್ಞಾನದ ಪೋಸಿಷನ್ ಪೇಪರ್.**

## ರಾಷ್ಟ್ರೀಯ ನೋಟ

ಸಮಾಜ ವಿಜ್ಞಾನ ಸಮಾಜದ ಕುರಿತು ವಿಭಿನ್ನವಾದ ದೃಷ್ಟಿಕೋನವನ್ನು ಹೊಂದಿದೆ. ಇದು ಚರಿತ್ರೆ ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರಗಳೆಂಬ ವಿವಿಧ ವಿಷಯಗಳ ವಿಶಾಲ ವ್ಯಾಪ್ತಿಯನ್ನೂ ಒಳಗೊಂಡಿದೆ. ಇಂಥ ಅರ್ಥಗರ್ಭಿತವಾದ ಪಠ್ಯಕ್ರಮವನ್ನು ಅಧ್ಯಯನಗೈಯುವಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ವಿಮರ್ಶಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಪ್ರತ್ಯೇಕವಾಗಿ ವಿದ್ಯಾರ್ಥಿಯೊಬ್ಬ ತನ್ನ ಜೀವನಾನುಭವವನ್ನು ಗಳಿಸಿಕೊಳ್ಳುವಲ್ಲಿ ವಿಶೇಷವಾದ ದೃಷ್ಟಿಯನ್ನು ಹೊಂದಿರಬೇಕು ಎಂಬುದು ಮುಖ್ಯ.

ಸಮಾಜ ವಿಜ್ಞಾನದ ವಸ್ತುವಿನ ಸಂಘಟನೆಯ ಬಗ್ಗೆ ಈಗಾಗಲೇ ಭಿನ್ನ ಭಿನ್ನವಾದ (ಹಲವಾರು) ಪಠ್ಯಕ್ರಮಗಳು ರಚಿಸಲ್ಪಟ್ಟಿವೆ. 1975 ರ ಪಠ್ಯಕ್ರಮದ "ಪ್ರತಿ ವಿಷಯಗಳಿಗೆ ಸಂಬಂಧಿಸಿದಂತೆ ಅಗತ್ಯವಾದ ಘಟಕವನ್ನು ಗುರುತಿಸುವುದು, ಅದನ್ನು ಸಮನ್ವಯ ಪಠ್ಯವಸ್ತುವಾಗಿ ಕ್ರೋಢೀಕರಿಸುವುದು ಸಮಾಜ ವಿಜ್ಞಾನವನ್ನು ಪ್ರತ್ಯೇಕವಾದ ವಿಷಯಾಂಶವಾಗಿಸುವುದು ಎಂದು ತಿಳಿಸಿದೆ. ಎನ್.ಸಿ.ಇ. ಆರ್.ಟಿ ಮೂರು ಬೇರೆ ಬೇರೆ ಪಠ್ಯಪುಸ್ತಕವನ್ನು (ಚರಿತ್ರೆ, ಭೂಗೋಳ, ಪೌರನೀತಿ) 6ನೇ ತರಗತಿಯಿಂದ 10ನೇ ತರಗತಿಯವರೆಗೆ ರಚಿಸಿದೆ. ( 10 ವರ್ಷಗಳ ಶಾಲಾ

ಶಿಕ್ಷಣ ಒಂದು ಚೌಕಟ್ಟು 1975 ಪುಟ 20) ಹೀಗಿದ್ದರೂ ಪರೀಕ್ಷಾ ಉದ್ದೇಶದಿಂದ ಈ ಮೂರು ಪಠ್ಯ ವಿಷಯಗಳನ್ನೂ ಒಟ್ಟಾಗಿ ಸಮಾಜ ವಿಜ್ಞಾನ ಎಂದು ಕರೆಯಲಾಗುತ್ತದೆ. 1998 ರಲ್ಲಿ ಪ್ರಕೃತ ಪಠ್ಯಕ್ರಮದ ಪರಿಶೀಲನೆಯಲ್ಲಿ " ಹಿರಿಯ ಪ್ರಾಥಮಿಕ ಹಂತದಲ್ಲಿ ವಿಶೇಷವಾದ ಬದಲಾವಣೆ ಮಾಡಲಾಗಿಲ್ಲ. ಆದರೂ ಸಮಾಜ ವಿಜ್ಞಾನದ ಪಠ್ಯಕ್ರಮದ ವಿನ್ಯಾಸದಲ್ಲಿ ವಿಶೇಷವಾದ ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗಿದೆ. ಯಾವುದೇ ಒಂದು ಉಪಾಂಗದ ಬಗ್ಗೆ ಮೇಲ್ನೋಟವನ್ನು ಹರಿಸಿಲ್ಲ (ರಾಷ್ಟೀಯ ಪ್ರಾಥಮಿಕ, ಪ್ರೌಢಶಿಕ್ಷಣ ಪಠ್ಯಕ್ರಮ, ಒಂದು ಚೌಕಟ್ಟು ಪುಟ ಸಂಖ್ಯೆ 27) ಎಂದು ತಿಳಿಸಿದೆ. ಪ್ರೌಢಶಿಕ್ಷಣದ ಹಂತದಲ್ಲಿ ಈಗಾಗಲೇ ಇರುವ ಮೂರು ವಿಷಯಗಳೊಂದಿಗೆ ಅರ್ಥಶಾಸ್ತ್ರವೂ ಸೇರಿ ನಾಲ್ಕು ವಿಷಯವಿದೆ. ಶಾಲಾಶಿಕ್ಷಣದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2000 ಸಮಾಜ ವಿಜ್ಞಾನವು ಗ್ರಹಿಸಲು ಸುಲಭವಾಗಬೇಕು, ಆದರೆ ವಿಷಯ ಹೊರೆಯಾಗಬಾರದು. ಇದರೊಂದಿಗೆ ಭೂಗೋಳಶಾಸ್ತ್ರ, ಚರಿತ್ರೆ, ಪೌರನೀತಿ ಅರ್ಥಶಾಸ್ತ್ರ, ಸಮಾಜ ಶಾಸ್ತ್ರದಂಥ ವಿಷಯಗಳು ಇದರಲ್ಲಿದ್ದು, ಅದರಲ್ಲಿನ ವಿವಿಧ ವಿಚಾರಗಳು "ಸರಳತೆಯಿಂದ ಕ್ಲಿಷ್ಟತೆ" ಯಡೆಗೆ ಎಂಬ ತತ್ವಕ್ಕೆ ಬದ್ಧವಾಗಿರಬೇಕು. ಅಂತೆಯೇ ಎಲ್ಲಾ ವಿಚಾರಗಳಿಗೂ ಸಮ ತೂಕವಿರುವಂತೆ ನೋಡಿಕೊಳ್ಳಬೇಕಾಗಿದೆ. (ಎನ್.ಸಿ.ಎಫ್.ಎಸ್.ಎಸ್.ಇ.-2000 ಪು.63) ಈ ನಿಟ್ಟಿನಲ್ಲಿ ಪ್ರಸ್ತುತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿನ ವಿಷಯಗಳಲ್ಲಿ ವಿವಿಧ ಕ್ಷೇತ್ರಗಳಲ್ಲಿ ಆಂತರಿಕ ಸಂಬಂಧವಿದೆ. ಇದಕ್ಕನುಸಾರವಾಗಿ 6 ರಿಂದ 10 ನೇ ತರಗತಿಗೆ ಸಮಾಜ ವಿಜ್ಞಾನದಲ್ಲಿ ಪ್ರತಿ ತರಗತಿಗೆ ಒಂದೊಂದು ಪಠ್ಯಪುಸ್ತಕವನ್ನು ರಚಿಸಲಾಗಿದೆ.

## 2. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು - 2005 ರ ಪರಿಕಲ್ಪನೆ:-

ಪ್ರಸ್ತುತ ರಾಷ್ಟೀಯ ಸಮೂಹ ನೋಟವು(ಎನ್.ಎಫ್.ಜಿ) ಮಾದರಿ ಸಾಮಾಜಿಕ ಅಧ್ಯಯನದ ಪಠ್ಯಕ್ರಮದ ರಚನೆಯನ್ನು ಗುರುತು ಹಚ್ಚಿತ್ತು. ಇದರಲ್ಲಿ ಸಾಕಷ್ಟು ಕಾರ್ಯವು ಬಾಕಿ ಉಳಿದಿದೆ. ಹೀಗಾಗಿ ಇದರಲ್ಲಿ ನೂತನ ಸ್ವತಂತ್ರ ಭಾರತದಲ್ಲಿ ವ್ಯಾಪಕ ಉದ್ಯೋಗವಕಾಶಗಳ ವಿಷಯವನ್ನೂ ಸೇರಿಸಲಾಗಿದೆ. ಮಾತ್ರವಲ್ಲ ಎನ್.ಎಫ್.ಜಿ. ಸಮಾಜ ವಿಜ್ಞಾನ ಪಠ್ಯಕ್ರಮದಲ್ಲಿ ಬಹು ದೊಡ್ಡ ಸಮುದಾಯವನ್ನು ತಲುಪುವ ವಾಸ್ತವಕ್ಕೆ ಸಂಬಂಧಿಸಿದ ಗೃಹಿಕಾಂಶಗಳ ಬಗ್ಗೆ ಚರ್ಚಿಸಲಾಗಿದೆ. ಇದು ಸಮಾಜ ವಿಜ್ಞಾನ ಪಠ್ಯಪುಸ್ತಕದ ಶಿಫಾರಸು, ಅನುಮಾನದ ಬಗ್ಗೆ - ಬೌದ್ಧಿಕವಾಗಿಯೂ ವೃತ್ತಿ ಪರವಾಗಿಯೂ ಒಂದು ಮೌಲ್ಯಯುತ ವಿಷಯವೆಂದು ತಿಳಿಸಿದೆ.

### 2.1.1: ಸಮಾಜ ವಿಜ್ಞಾನ ಗ್ರಹಿಕೆಯ ಪ್ರಭುತ್ವ:

ಪ್ರಚಲಿತ ಸಮಾಜ ವಿಜ್ಞಾನದ ಗೃಹಿಕೆಯ – ವಿಷಯ ದ ನಿಷ್ಪ್ರಯೋಜಕತೆಯನ್ನು ತಿಳಿಸುತ್ತದೆ. ತತ್ಪರಿಣಾಮ ಸಂವಹನದ ಪ್ರಕ್ರಿಯೆಯು ವಿದ್ಯಾರ್ಥಿಗಳ ಮೇಲೆ ಪರಿಣಾಮವನ್ನುಂಟು ಮಾಡುತ್ತದೆ.

ಒಂದು ರೀತಿಯಲ್ಲಿ ಇದು ಶಿಕ್ಷಕರನ್ನೂ, ವಿದ್ಯಾರ್ಥಿಗಳನ್ನು ನಿರಾಸಕ್ತಿಗೊಳಿಸುತ್ತದೆ. ಶಾಲಾ ಶಿಕ್ಷಣದ ಪ್ರಾರಂಭದ ಹಂತದಲ್ಲಿ ನಿಸರ್ಗ ವಿಜ್ಞಾನವು ಸಮಾಜ ವಿಜ್ಞಾನಕ್ಕಿಂತ ಶ್ರೇಷ್ಠವಾಗಬೇಕೆಂದು ಸಲಹೆ ನೀಡಲಾಗಿದೆ. ಇದು ವಿದ್ಯಾರ್ಥಿಗಳನ್ನು ಬುದ್ಧಿವಂತರನ್ನಾಗಿಸುತ್ತದೆ. ಹೀಗಾಗಿ ಸಮಾಜ ವಿಜ್ಞಾನ ಸಾಮಾಜಿಕ, ಸಾಂಸ್ಕ್ರತಿಕ, ಗಣಿತಾತ್ಮಕ ಕೌಶಲಗಳನ್ನು ಕಲಿಸುವ ಅಗತ್ಯವನ್ನೂ ಹೊಂದಿದೆ. ಇದು ಪ್ರಪಂಚದ ವಿವಿಧ ವಿಚಾರಗಳ ನಡುವೆ ಆಂತರಿಕ ಬಾಂಧವನ್ನು ತಿಳಿಸುತ್ತದೆ.

2.1.2: ಸಮಾಜ ವಿಜ್ಞಾನವು ಸಾಮಾನ್ಯವಾಗಿ ಮಾಹಿತಿಯನ್ನೂ ವರ್ಗಾಯಿಸುತ್ತದೆ.

ಆದರೆ ಈ ಪಠ್ಯ ವಸ್ತುವು ಕೇವಲ ಪರೀಕ್ಷೆಗಾಗಿ ಬೋರ್ ಹೊಡೆದು ಕಲಿಯುವ ವಿಚಾರಗಳನ್ನು ಒಳಗೊಂಡಿದೆ. ಇದರಲ್ಲಿನ ವಿಚಾರಗಳು ದೈನಂದಿನ ವಿಚಾರಗಳೊಂದಿಗೆ ಸಂಬಂಧವಿರಿಸಿಕೊಂಡಿಲ್ಲ, ಅನಗತ್ಯವಾದ ಐತಿಹಾಸಿಕಾಂಶಗಳನ್ನೂ ಇರಿಸಿಕೊಂಡಿದೆ. ಅದೂ ಸಹ ವೈಭವೋಪೇತವಾದ ಸನ್ನಿವೇಶಗಳನ್ನೊಳಗೊಂಡಿದೆ. ಇದೆಲ್ಲವನ್ನೂ ವಿದ್ಯಾರ್ಥಿಗಳು ಕೆಲಕಾಲ ಸ್ಮರಣೆಯಲ್ಲಿಟ್ಟುಕೊಳ್ಳುತ್ತಾರೆ. ಬಳಿಕ ಮರೆತುಬಿಡುತ್ತಾರೆ. ಇಂಥ ವಿಷಯಗಳ ಕಾರಣದಿಂದಾಗಿ ಪ್ರಕೃತ ಪರೀಕ್ಷಾ ವ್ಯವಸ್ಥೆಯನ್ನು ಪರಿಶೀಲಿಸಬೇಕಾಗಿದೆ.

2.1.3: ಸಮಾಜ ವಿಜ್ಞಾನವನ್ನು ವಿಶೇಷ ವಿಷಯವಾಗಿ ಅಭ್ಯಸಿಸುವುದರಿಂದ ಆ ವಿದ್ಯಾರ್ಥಿಗಳಿಗೆ ಇಷ್ಟವಾದ ಉದ್ಯೋಗಳೂ ದೊರಕುವುದಿಲ್ಲವೆಂಬ ನಂಬಿಕೆ ಇದೆ. ಹೀಗಾಗಿ ಪ್ರಸ್ತುತ ಪ್ರಪಂಚದ ಕಾರ್ಯಗತಿಯಲ್ಲಿ ಸಮಾಜ ವಿಜ್ಞಾನವು ವಿವಿಧ ಕೌಶಲಗಳನ್ನೂ ಒಳಗೊಂಡಿರಬೇಕು. ಆಗ ಅಗತ್ಯವಾದ ಸೇವಾ ಕ್ಷೇತ್ರಗಳಲ್ಲಿ ಉದ್ಯೋಗಾಂಕ್ಷಿಗಳನ್ನೂ ಹೆಚ್ಚಿಸಬಹುದು. ಇದರಿಂದ ಸಂಖ್ಯೆಯ ದೃಷ್ಟಿಯಿಂದಲೂ, ಸೃಜನಶೀಲತೆಯ ಹಿನ್ನೆಲೆಯಲ್ಲಿಯೂ ಆಯಾ ವಿದ್ಯಾರ್ಥಿಗಳಿಗೆ ಅವರವರ ಅಗತ್ಯ (ಬದುಕಿನ/ಉದ್ಯೋಗದ) ಗಳನ್ನೂ ಪೂರೈಸಬಹುದು.

2.2 **ತಿಳಿಸಬಹುದಾದ ಸಂಗತಿಗಳು – ಪಠ್ಯಾಂಶಗಳ ಹಂಚಿಕೆ**:–

2.2.1:**ಎನ್.ಎಫ್.ಜಿ. ಯಶಪಾಲ್** ಸಮಿತಿಯ ಹಾಗೂ ಎನ್.ಸಿ.ಎಫ್.ಎಸ್.ಇ.–2000 ರ ಪ್ರಸ್ತಾಪಗಳನ್ನು ದೃಢೀಕರಿಸಿದೆ. ಇದು ಇಂದು ಮಾಹಿತಿಗಳ ಧಾರಣೆಯು ಗ್ರಹಣ ಶಕ್ತಿಗಿಂತ ಕಡಿಮೆಯಾಗಿದೆ. ಆದುದರಿಂದ ಪಠ್ಯಕ್ರಮ ರಚನೆಗಾರರು ಹಾಗೂ ಪಠ್ಯಪುಸ್ತಕ ತಯಾರಿಸುವವರು ಸಮುದಾಯಕ್ಕೆ ಅಗತ್ಯವಾದ ಮಾಹಿತಿಗಳನ್ನು ಪಡೆದುಕೊಳ್ಳಬೇಕು, ಸಾಧ್ಯವಾದಷ್ಟು ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಬೇಕು. ಇದು ಸಮುದಾಯದ ಸಾಮಾಜಿಕ ರಾಜಕೀಯ, ಸತ್ಯಾಸತ್ಯತೆಗಳನ್ನೂ ವಿಶ್ಲೇಷಿಸಿರಬೇಕು ಎಂದಿದೆ.

2.2.2: **ಬಹುಮುಖಿ ಸಮಾಜ ಹಾಗೂ ಸ್ಥಳೀಯ ವಿಷಯ**:–

ನಮ್ಮ ಈ ಬಹುಮುಖಿ ಸಾಮಾಜಿಕ ವ್ಯವಸ್ಥೆಯಲ್ಲಿ ಸರ್ವ ಜಾತಿ, ಧರ್ಮ, ಸಾಮಾಜಿಕ ಗುಂಪುಗಳಿಗೆ ಸಂಬಂಧಿಸಿದ ವಿಷಯಗಳನ್ನೂ ಪ್ರಸ್ತುತ ಪಠ್ಯಪುಸ್ತಕದಲ್ಲಿ ಸೇರಿಸುವುದು ಮುಖ್ಯ. ಇದು ಕೆಲವೊಮ್ಮೆ ಕೇಂದ್ರೀಕೃತ ಪಠ್ಯಪುಸ್ತಕಗಳಲ್ಲಿ ಸಾಧ್ಯವಾಗದಿರಬಹುದು. ಹೀಗಾಗಿ ಸಮುದಾಯಕ್ಕೆ ಸಂಬಂಧಿಸಿದಂತೆ ವಿಕೇಂದ್ರೀಕೃತ ಜ್ಞಾನವನ್ನು ಅದರ ಸತ್ಯಾಂಶಗಳನ್ನು "ವಿಷಯ"ವಾಗಿ ಅಳವಡಿಸಬೇಕಾಗಿದೆ. ಸ್ಥಳೀಯ ವಿಚಾರಗಳನ್ನೂ ಚಟುವಟಿಕೆಯ ಮುಖಾಂತರ ನೀಡಬಹುದು.

2.2.3.: **ವೈಜ್ಞಾನಿಕ ಮಹತ್ವ**: ಪ್ರಸ್ತುತ – ಇಂದಿನ ಪಠ್ಯಪುಸ್ತಕದಲ್ಲಿ ಅಲ್ಲಲ್ಲಿ ನೈಸರ್ಗಿಕ ಭೌತಿಕ ವಿಚಾರಗಳಿಗೆ ಸಂಬಂಧಿಸಿದಂತೆ ವೈಜ್ಞಾನಿಕ ವಿಶ್ಲೇಷಣೆಯತ್ತ ಹೆಚ್ಚೇನೂ ಗಮನಹರಿಸಿದಂತಿಲ್ಲ. ಮಾನವಿಕ ಶಾಸ್ತ್ರ(ಚರಿತ್ರೆ, ಭೂಗೋಳ ಶಾಸ್ತ್ರ, ಅರ್ಥಶಾಸ್ತ್ರ, ರಾಜಕೀಯ ವಿಜ್ಞಾನ ಇತ್ಯಾದಿ) ಗಳೂ ಸಹಜವಾಗಿ ವೈಜ್ಞಾನೀಕರಣಕ್ಕೆ ಸಂಬಂಧಿಸಿಲ್ಲ. ಶಿಕ್ಷಣದ ಉನ್ನತ ಹಂತಗಳಲ್ಲಿ ನಿಸರ್ಗವಿಜ್ಞಾನಕ್ಕೆ ನ್ಯಾಯಯುತವಾಗಿ ಅವಕಾಶಗಳನ್ನೂ ಕಲ್ಪಿಸಲಾಗಿದೆ. ಕೆಲವು ಸಮಾಜ ವಿಜ್ಞಾನದ ಪ್ರಯೋಗಶೀಲರು. ಸಮಾಜ ವಿಜ್ಞಾನದ ಬೋಧನೆಯಲ್ಲಿ ಭೌತಶಾಸ್ತ್ರ ಹಾಗೂ ನಿಸರ್ಗ ವಿಜ್ಞಾನದ ಬೋಧನಾ ಪದ್ಧತಿಗಳನ್ನೂ ಅನುಸರಿಸಿರುವರು. ಆದರೆ ಸಮಾಜ ವಿಜ್ಞಾನದಲ್ಲಿ ಭೌತಶಾಸ್ತ್ರ, ನಿಸರ್ಗವಿಜ್ಞಾನಗಳಂತೆ ವೈಜ್ಞಾನಿಕ ವಿಶೇಷಣೆಯು ಕರಾರು ವ್ಯಕ್ತವಾಗಿಲ್ಲ.

2.2 4: **ಸಾಮಾನ್ಯೀಕರಣಕ್ಕೆ ಬದ್ಧತೆ:–**

ಸಮಾಜ ವಿಜ್ಞಾನವು ಮಾನವ ಮೌಲ್ಯಗಳಿಗೆ ಉದಾ:– ಸ್ವಾತಂತ್ರ್ಯ, ನಂಬಿಕೆ, ಪರಸ್ಪರ ಗೌರವ ಮೊದಲಾದವುಗಳಿಗೆ ಜವಾಬ್ದಾರವಾಗಿದೆ. ಈ ದೃಷ್ಟಿಯಲ್ಲಿ ಸಮಾಜ ವಿಜ್ಞಾನ – ಕಲಿಯುವ ವಿದ್ಯಾರ್ಥಿಗಳ ನೈತಿಕ, ವಿಮರ್ಶಾತ್ಮಕ ಶಕ್ತಿ–ಸಾಮರ್ಥ್ಯಗಳ ಕುರಿತು ಸಂಶೋಧನೆ ನಡೆಸುತ್ತದೆ. ಪರಿಸರದ ಅನಾಹುತ, ಜಾತಿ ಮತಗಳ ಅಸಮಾನತೆ ಮೊದಲಾದುವುಗಳ ಬಗ್ಗೆ ಪಠ್ಯಪುಸ್ತಕಗಳ ಮುಖೇನ ವಿದ್ಯಾರ್ಥಿಗಳಲ್ಲಿ ಉತ್ತಮ ಚಿಂತನೆ, ಸೃಜನಶೀಲತೆಗಳನ್ನೂ ಪ್ರಚೋದಿಸಬಹುದು.

2.2. 5: **ಶಿಸ್ತುಗಳ ನಡುವೆ ಆಂತರಿಕ ಸಂಬಂಧ:–**

ಸಮಾಜ ವಿಜ್ಞಾನದಲ್ಲಿರುವ ಚರಿತ್ರೆ, ಭೂಗೋಳ ಶಾಸ್ತ್ರ, ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರಗಳಿಗೆ ವಿಭಿನ್ನವಾದ ಬೋಧನಾ ಪದ್ಧತಿಗಳಿವೆ. ಅವುಗಳಿಗೆ ನಿಶ್ಚಿತ ಮೇರೆಗಳಿವೆ. ಇದರಲ್ಲಿ ಒಂದು ತೆರನಾದ ಶಿಸ್ತನ್ನು ಕಂಡುಕೊಳ್ಳಬೇಕಾಗಿದೆ. ಬಹುಮುಖೀಯವಾದ ಭೋಧನಾ ಕ್ರಮಗಳನ್ನು ಅನ್ವಯಿಸಿಕೊಳ್ಳಬೇಕಾಗಿದೆ. ಇದಕ್ಕೆ ಪೂರಕವಾಗಿ ಪಠ್ಯಕ್ರಮದ ಗುರಿ ಉದ್ದೇಶಗಳ ನಡುವೆ ಆಂತರಿಕ ಶಿಸ್ತನ್ನುಂಟು ಮಾಡಬೇಕಾಗಿದೆ. ಇದು ವಿದ್ಯಾರ್ಥಿಗಳ ವಯಮಟ್ಟ, ಮನೋಮಟ್ಟಗಳಿಗೆ ಅನುಗುಣವಾಗಿರಬೇಕು, ಅವರ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗುರಿಗಳನ್ನು ನಿರೂಪಿಸಬೇಕಾಗಿದೆ, ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಹೀಗಾಗಿ ಬೇರೆ ಬೇರೆ ಶಿಸ್ತಿನ ಉಪಕ್ರಮಗಳನ್ನು – ಪಠ್ಯ ಪುಸ್ತಕದ ಆಳವಾದ ಅಧ್ಯಯನದಿಂದ ಕಂಡುಕೊಳ್ಳಬೇಕಾಗಿದೆ. ಆದರೆ ಎಲ್ಲಾ ವಸ್ತು, ವಿಷಯಗಳನ್ನೂ ( ಸಮಾಜ ವಿಜ್ಞಾನದ)ಈ ಆಂತರಿಕ ಶಿಸ್ತಿಗೆ ಅನ್ವಯಿಸಿ ಚರ್ಚಿಸಲಾಗುವುದಿಲ್ಲ. ಕೆಲವು ವಸ್ತು, ವಿಷಯಗಳನ್ನೂ ಮಾತ್ರ ಎಚ್ಚರದಿಂದ ಆಯ್ದುಕೊಂಡು 'ಶಿಸ್ತಿ' ಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕವಾಗಿ ರೂಪಿಸಬೇಕಾಗಿದೆ.

| |
|---|
| ಆಂತರಿಕ ಶಿಸ್ತಿನ ಉಪಕ್ರಮಗಳನ್ನೂ ನಿರ್ದಿಷ್ಟ ಪಠ್ಯ ವಸ್ತುವಿಗೆ ಅನ್ವಯಿಸಿ ನಿರ್ದಿಷ್ಟ ಶೈಕ್ಷಣಿಕ ವರ್ಷದಲ್ಲಿ ಅಭ್ಯಾಸಿಸುವಂತಾಗಬೇಕು. ಉದಾ: ಮಂಡಿ ಸಂಸ್ಥೆಯು ಒಂದು ವಸ್ತು. ಇದು ಬಹಳಷ್ಟು ಶಿಸ್ತಿನ ವಿಚಾರಗಳೊಂದಿಗೆ ಸಂಬಂಧವಿರಿಸಿಕೊಂಡಿದೆ. |

**3. ಜ್ಞಾನ ಶಾಸ್ತ್ರದ ಚೌಕಟ್ಟು** : ಜ್ಞಾನ ಶಾಸ್ತ್ರದನ್ವಯ ಸಮಾಜ ವಿಜ್ಞಾನವನ್ನು ಅಭ್ಯಸಿಸುವಲ್ಲಿ, ಅದರಲ್ಲಿ ಗ್ರಹಿಕೆಗೆ ಸಂಬಂಧಿಸಿದಂತೆ ಇನ್ನಷ್ಟು ವಿಷಯಗಳನ್ನೂ ಸೇರಿಸಬೇಕಾಗಿದೆ. ಎನ್.ಎಫ್.ಜಿ. ಈ ಹೊಸ ಪಠ್ಯಕ್ರಮಕ್ಕೆ ಈ ಕೆಳಗಿನ ನಾಲ್ಕು ಅಂಶಗಳನ್ನೂ ಸೂಚಿಸಿದೆ.

3.1.1: ಕೊಠಾರಿ ಆಯೋಗ ಭಾರತ ದೇಶವನ್ನೂ ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರವೆಂದು ತಿಳಿಸಿದೆ. ಈ ಹಿನ್ನಲೆಯಲ್ಲಿ ಬಡತನ, ಅನಕ್ಷರತೆ, ಜಾತಿಯತೆಗಳು ಈ ರಾಷ್ಟ್ರದ ಏಳಿಗೆಗೆ ಧಕ್ಕೆ ತರುವ ಅಂಶಗಳಾಗಿವೆ. ಆದರೆ "ಲಿಂಗ" (ಜಂಡರ್) ತಾರತಮ್ಯವಾದ ವಿಚಾರವನ್ನೂ ನಿರ್ಲಕ್ಷಿಸಿದೆ. ಇದು ಬಿಟ್ಟು ಸಮುದಾಯದ ಅನಕ್ಷರತೆಗೆ ಕಾರಣವಾಗಿದೆ. ಈ ಹಿನ್ನಲೆಯಲ್ಲಿ ಭಾರತದ ದೃಷ್ಟಿಯಿಂದ ಆಯೋಗ ಪಠ್ಯಕ್ರಮವನ್ನೂ ಜ್ಞಾನ ಶಾಸ್ತ್ರಕ್ಕನುಸಾರವಾಗಿ ಪುನರ್ ವಿನ್ಯಾಸಕ್ಕೆ ಸೂಚಿಸಿದೆ. ಇದರೊಂದಿಗೆ ರಾಷ್ಟ್ರೀಯ ದೃಷ್ಟಿಕೋನ, ಹಾಗೂ ಸ್ಥಳೀಯ ಅಗತ್ಯಗಳನ್ನು ಸೃಜನಾತ್ಮಕವಾಗಿ ಸರಿದೂಗಿಸಿದೆ. ಇದು ಆಗಬೇಕಾದರೆ ಸ್ಥಳೀಯ ವಿಷಯಗಳನ್ನೂ (ಗ್ರಹಿಕೆಗಳನ್ನೂ) ರಾಷ್ಟ್ರ ಮಟ್ಟದ ವಿಷಯಗಳಿಗೆ ಸಂಬಂಧಿಸಿದಂತೆ ಅಳವಡಿಸಬೇಕಾಗಿದೆ. ಇದಕ್ಕೆ ರಾಷ್ಟ್ರದ ವಿಚಾರಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಹೆಚ್ಚಿನ ಯತ್ನ ನಡೆಸಬೇಕಾಗಿದೆ.

**3.1.2: ಜ್ಞಾನದ ಮೂಲ** – ಪಠ್ಯಪುಸ್ತಕ ಇದರಿಂದ ಕಲಿಸುವವರು, ಕಲಿಯುವವರು ಸಕ್ರಿಯವಾಗಿ ಕಲಿಕೆಯ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಶೋಧನೆ ನಡೆಯಬೇಕಾಗಿದೆ. ಈ ಪಠ್ಯಪುಸ್ತಕಗಳು ಕಲಿಯುವವನಿಗೆ, ಮುಂದಿನ ಕಲಿಕೆಗೂ ಪ್ರೋತ್ಸಾಹ ನೀಡುವಂತಿರಬೇಕು.

3.1.3: ಪ್ರಸಕ್ತ ಸಮಾಜ ವಿಜ್ಞಾನ ಪಠ್ಯಕ್ರಮವು ದೇಶದ ಅಭಿವೃದ್ಧಿಯ ವಿಚಾರಗಳನ್ನು ಸೂಚಿಸುತ್ತದೆ. ಆದರೆ ಸಮಾನತೆ, ಸಾಮಾಜಿಕ ನ್ಯಾಯ, ಸಾಮಾಜಿಕ ಸ್ಥಾನಮಾನ – ಗೌರವಗಳಂಥ ಮೌಲ್ಯಗಳನ್ನೂ ಅರ್ಥ ಮಾಡಿಕೊಳ್ಳಲು ಪೂರಕವಾಗಿಲ್ಲ. ಹೀಗಾಗಿ ಈ ಸಮಾಜ ವಿಜ್ಞಾನ ಬೋಧನೆಯು ಒಟ್ಟು ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಅವನ ಪಾತ್ರಕ್ಕೆ

ಬೆಸುಗೆಯಂತಿರಬೇಕು. ಈ ದೃಷ್ಟಿಯಲ್ಲಿ ಹಿಂದಿನ ವಿಚಾರಗಳೊಂದಿಗೆ ಬಹುಜನ ಕಲ್ಯಾಣ ಸಿದ್ಧಾಂತ ಹಾಗೂ ಸಮಾನತಾ ಸಿದ್ಧಾಂತಗಳತ್ತವೂ ಗಮನಹರಿಸಬೇಕಾಗಿದೆ. ಸಮಾಜ ವಿಜ್ಞಾನದಲ್ಲಿ ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳನ್ನರಿಯಲು ವಿದ್ಯಾರ್ಥಿಗಳಿಗೆ ಸಾಮಾಜಿಕ ನ್ಯಾಯದ ಬಗ್ಗೆ ಮಾಹಿತಿಯುಕ್ತ ವಿಷಯಗಳಿರಬೇಕು. ಚರಿತ್ರೆಗೆ ಸಂಬಂಧಿಸಿದಂತೆ ಭಾರತದ ಬೇರೆ ಬೇರೆ ಸ್ಥಳಗಳಲ್ಲಿನ ಸಮಾಜದ ವಿವಿಧ ಕ್ಷೇತ್ರಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ಪ್ರಕೃತ ಪಠ್ಯಪುಸ್ತಕದಲ್ಲಿ ನಿರ್ಲಕ್ಷಿಸಿರುವ ಕಾರಣ ಬಂದ ಅದರ ಅಗತ್ಯವನ್ನು ಸರಿಪಡಿಸಬೇಕಾಗಿದೆ.

3.1.4: **ಎನ್.ಎಫ್.ಜಿ.** ಯ ಪ್ರಕಾರ – ಪೌರನೀತಿ, ರಾಜಕೀಯ ವಿಜ್ಞಾನದಲ್ಲಿರುವ ಪಾರಿಭಾಷಿಕ ಶಬ್ದಗಳನ್ನು ಬದಲಿಸಬೇಕಾಗಿದೆ. ಭಾರತದಲ್ಲಿ ಮೊದಲ ಪೌರನೀತಿ ಪುಸ್ತಕವನ್ನು ಮೊದಲಿಗೆ ಜಾರಿಗೆ ತಂದವರು ಲಿವಾರ್ನರ್ ಆಗ ಭಾರತದಲ್ಲಿ ವಸಾಹತುಶಾಹಿ ಧೋರಣೆ ಇತ್ತು. ಜನರಲ್ಲಿ ರಾಜ ಭಕ್ತಿಯ ವಿರುದ್ಧದ ವಿಚಾರಗಳೂ ಇತ್ತು. ಹೀಗಾಗಿ ಈ ಪುಸ್ತಕದಲ್ಲಿ ವಸಾಹತು ನೀತಿಯ ನಿಯಮಗಳು, ಪ್ರಗತಿ, ಜನಾಂಗೀಯತೆ, ಅಂದಿನ ಭಾರತೀಯರ ವ್ಯಕ್ತಿತ್ವದ ಬಗ್ಗೆಯೂ ತಿಳಿಸಲಾಗಿದೆ. ಇದಕ್ಕೆ ವಿರುದ್ಧವಾಗಿ ರಾಜಕೀಯ ವಿಜ್ಞಾನದಲ್ಲಿ – ಪ್ರಜಾಪ್ರಭುತ್ವದ ಸಂರಚನೆ, ಕಾರ್ಯತಂತ್ರಗಳು, ಸಾಮಾಜಿಕ ಶಕ್ತಿಯ ಮೂಲಗಳು, ಅವುಗಳನ್ನು ಎದುರಿಸುವಿಕೆಯ ಬಗ್ಗೆ ಸಲಹೆ ಸೂಚನೆಗಳನ್ನೂ ಸ್ಪಷ್ಟವಾಗಿ ನೀಡಲಾಗಿದೆ.

ಸಾರಾಂಶ:–

- ನಿರ್ದಿಷ್ಟ ರೀತಿಯಲ್ಲಿ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಈ ಪಠ್ಯಪುಸ್ತಕ ಒಂದು ಸುದ್ದಿ ಮಾಧ್ಯಮ.
- ಹಿಂದಿನ ಜನ ಜೀವನವನ್ನು ತಿಳಿಸಿಕೊಡುತ್ತದೆ
- ಬಹುಜನ ಕಲ್ಯಾಣ ಸಿದ್ಧಾಂತ ಹಾಗೂ ಸಮಾನತಾ ಸಿದ್ಧಾಂತ
- ಪಠ್ಯಪುಸ್ತಕವನ್ನು ಬಳಸುವಲ್ಲಿ ಇದೊಂದು ಅದ್ಭುತ ದಾಖಲೆ

ರಾಜಕೀಯ ವಿಜ್ಞಾನ, ಪೌರ ಸಮಾಜವು ಒಂದು ಗೋಳಗೋಪಾದಿಯಲ್ಲಿದೆ. ಇದು ಸಂವೇಣಾತ್ಮಕವೊ, ಆಂತರಿಕ ಸಂಬಂಧವುಳ್ಳದ್ದೂ, ಸಂವಾಹನಾತ್ಮಕವೂ ಚಿಂತನಾತ್ಮಕವೂ ಆದ ಪ್ರಶ್ನೆಗಳನ್ನು ಸೃಷ್ಟಿಸುತ್ತದೆ.

3.1.5: " **ಲಿಂಗ ಸಮಾನತೆ** " ಗೆ ಸಂಬಂಧಪಟ್ಟ ವಿಷಯಗಳನ್ನು ಸಮಾಜ ವಿಜ್ಞಾನದಲ್ಲಿ ಪ್ರಸ್ತುತಪಡಿಸಲಾಗಿದೆ. ಉದಾ:– ಚರಿತ್ರೆಯಲ್ಲಿ ರಾಣಿ ಲಕ್ಷ್ಮಿಬಾಯಿ, ಸರೋಜಿನಿ ನಾಯ್ಡು ಮೊದಲಾದ ಸ್ವಾತಂತ್ರ್ಯ ಯೋಧರ ಬಗ್ಗೆ ಸ್ವಲ್ಪ ಮಟ್ಟಿಗೆ ನೀಡಲಾಗಿದೆ. ಆದರೆ ಲಿಂಗತ್ವ ದ ಬಗ್ಗೆ ಸೇರಿಸಿಲ್ಲ. ಹೀಗಾಗಿ ಪ್ರಚಲಿತ ವಿಚಾರಗಳನ್ನು ಚರಿತ್ರೆಗೆ ಸಂಬಂಧಿಸಿದ ವಿಚಾರಗಳನ್ನೂ ಒಟ್ಟಿಗೆ ಅಭ್ಯಸಿಸಿದರೆ (ಹೋಲಿಸಿದರೆ) "ದ್ವಂದ್ವ" ವಾಗುತ್ತದೆ. ಆದುದರಿಂದ ಜ್ಞಾನ ಸಿದ್ಧಾಂತದ ವಿಚಾರಗಳನ್ನು ಸಮಾಜ ವಿಜ್ಞಾನದಲ್ಲಿ ವಾಸ್ತವಿಕವಾಗಿ ನಿರ್ದಿಷ್ಟ ಚೌಕಟ್ಟಿನೊಳಗೆ ಸೇರಿಸಬೇಕಾಗಿದೆ.

## 4. ಸಮಾಜ ವಿಜ್ಞಾನದ ಬೋಧನೆ:

ಸಮಾಜ ವಿಜ್ಞಾನ ಬೋಧನೆ (ಅಧ್ಯಯನ) ಗೆ ಕಾರಣಗಳು ಬಹು ವಿಸ್ತಾರವಾಗಿದ್ದು – ಅದು ವಿದ್ಯಾರ್ಥಿಗಳಿಗೆ –

* ಸಮಾಜ ಹೇಗೆ ಸಂರಚನೆಗೊಂಡಿದೆ. ಅದರ ವ್ಯವಸ್ಥೆ, ಆಡಳಿತ, ಕಾಲಕಾಲಕ್ಕೆ ಯಾವ ರೀತಿಯಲ್ಲಿ ಬದಲಾವಣೆ ಕಂಡಿದೆ ಎಂದು ಅರ್ಥ ಮಾಡಿಸುತ್ತದೆ.

*ಪ್ರಜಾಸತ್ತಾತ್ಮಕ ಭಾರತ ಸಂವಿಧಾನದಲ್ಲಿ ನೀಡಲಾದ ಸಮಾಜದ ಕಟ್ಟುಕಟ್ಟಳೆ, ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮೊದಲಾದುವುಗಳ ಬಗ್ಗೆ ಪ್ರಶಂಸಿಸುವಂತೆ ಮಾಡುತ್ತದೆ.

*ಚಟುವಟಿಕೆ, ಜವಾಬ್ದಾರಿ, ಚಿಂತನಾತ್ಮಕ ಸಮಾಜದ ಸದಸ್ಯವಾಗಿ ಬೆಳೆಯುವಂತೆ ಮಾಡುತ್ತದೆ.

*ಬೇರೆ,ಬೇರೆ ಅಭಿಪ್ರಾಯ ಜೀವನಕ್ರಮ, ಸಾಂಸ್ಕೃತಿಕ ಅಭ್ಯಾಸ(ರೂಢಿ) ಗಳ ಬಗ್ಗೆ ಗೌರವಿಸುವಂತೆ ಕಲಿಯುವಂತೆ ಮಾಡುತ್ತದೆ.

*ಸ್ವೀಕೃತ ಸಂಸ್ಥೆ, ಹಂಚಿಕೆಗಳನ್ನೂ ಪ್ರಶ್ನಿಸಲು, ಪರೀಕ್ಷಿಸಲು ನೆರವು ನೀಡುತ್ತದೆ.

*ಸಾಮಾಜಿಕ ಹಾಗೂ ಜೀವನದ ಕೌಶಲಗಳಿಗೆ ಸಂಬಂಧಪಟ್ಟಂತೆ ಚಟುವಟಿಕೆಗಳನ್ನೂ ಅರ್ಥಮಾಡಿಕೊಳ್ಳಲು, ಸಮಾಜದೊಂದಿಗೆ ಬೆರೆಯಲು ಅದನ್ನು ಅರ್ಥ ಮಾಡಿಕೊಳ್ಳಲು ಅನುಕೂಲ ಮಾಡಿಕೊಡುತ್ತದೆ.

*ಓದಿನಿಂದ ಸಂತೋಷ ಹೊಂದಲು ಸಹಾಯ ಮಾಡುತ್ತದೆ.
- ಹೀಗೆ ತರಗತಿಯಲ್ಲಿನ ಪಠ್ಯ ಪುಸ್ತಕಗಳಲ್ಲಿ ವಿಷಯ, ಭಾಷೆ, ಕಲ್ಪನೆ, ಲಿಂಗ, ಸಂವೇಗಗಳು, ಸಾಮಾಜಿಕ ಸ್ಥಾನಮಾನಗಳ ಬಗ್ಗೆ ವಿಮರ್ಶೆಯಂಥ ಎಲ್ಲಾ ವಿಚಾರಗಳು ಸೇರಿವೆ.

**4.1: ಪ್ರಾಥಮಿಕ ಹಂತ: ಪ್ರಾಥಮಿಕ ಹಂತದಲ್ಲಿ ಸಮಾಜ ವಿಜ್ಞಾನದ ಉದ್ದೇಶಗಳು:-**

*ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಗುರುತಿಸುವಿಕೆ, ವಿಶ್ಲೇಷಿಸುವಿಕೆಯಂಥ ಕೌಶಲಗಳನ್ನು ಅಭಿವೃದ್ಧಿಪಡಿಸುವುದು.
*ನಿಸರ್ಗ ಹಾಗೂ ಸಾಮಾಜಿಕ ಪರಿಸರಗಳ ನಡುವೆ ಇರುವ ಆಂತರಿಕ ಸಂಬಂಧಗಳನ್ನು ಅರ್ಥಮಾಡಿಸುವುದು.
*ಪ್ರತಿಯೊಬ್ಬರಲ್ಲಿ ಸಾಮಾಜಿಕ ವಿಚಾರ, ಅದರ ಅಭಿವೃದ್ಧಿ - ಸಮಾಜದ ವೈವಿಧ್ಯತೆಯ ಬಗ್ಗೆ ತಿಳಿಸುವುದು.

4.1.1: ತರಗತಿ 1 ಮತ್ತು 2 : ಈ ಹಂತದಲ್ಲಿ ಗಣಿತ ಹಾಗೂ ಭಾಷಾ ಪಾಠಗಳಲ್ಲಿ ಪ್ರಕೃತಿ ಹಾಗೂ ಸಾಮಾಜಿಕ ಪರಿಸರದ ಬಗ್ಗೆ ವಿವರಿಸುವುದು ಒಂದು ಅವಿಭಾಜ್ಯ ಅಂಗವಾಗಿದೆ. ಇದಕ್ಕೆ ಸಂಬಂಧಿಸಿದಂತೆ ದೈಹಿಕ, ಜೈವಿಕ ಸಾಮಾಜಿಕ ಹಾಗೂ ಸಾಂಸ್ಕ್ರತಿಕ ವಿಷಯಗಳ ಉದಾಹರಣೆಗಳನ್ನೂ ಚಟುವಟಿಕೆಗಾಗಿ ಬಳಸಬಹುದು. ಬೋಧನಾ ಪದ್ಧತಿಯು ಸಕ್ರಿಯವಾದ ಭಾಗವಹಿಸುವಿಕೆ, ಚರ್ಚೆಯಿಂದ ಕೂಡಿರಲಿ. ಉದಾ: ಕಥೆ ಹೇಳುವುದು, ಚಿತ್ರ ಬಿಡಿಸುವುದು, ನೃತ್ಯ, ಹಾಡು ಇತ್ಯಾದಿ. ಶಿಕ್ಷಕರ ಕೈಪಿಡಿಯಲ್ಲಿ ಇದಕ್ಕೆ ಪೂರಕವಾಗಿ ಪರಿಸರದ ಕಾಳಜಿ ವಹಿಸುವ ವಿವಿಧ ಚಟುವಟಿಕೆಗಳನ್ನು ಉದಾಹರಣೆಯಾಗಿ ನೀಡಬೇಕು.
4.1.2: 3 ರಿಂದ 5 : ಈ ಹಂತದಲ್ಲಿ ಪರಿಸರ ವಿಜ್ಞಾನವನ್ನೂ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರಕ್ಕೆ ಸಂಬಂಧಿಸಿದಂತೆ ಚರ್ಚಿಸುವಂತಿರಬೇಕು. ಪರಿಸರದ ಬಗ್ಗೆ ಅಭ್ಯಾಸ ಮಾಡುವಲ್ಲಿ ಪರಿಸರವು ಹಾಳಾಗದಂತೆ ಎಚ್ಚರ ವಹಿಸುವುದು, ಉಳಿಸಿಕೊಳ್ಳುವುದು. ಸಾಮಾಜಿಕ ಪರಿಸರದಲ್ಲಿ ಮಾನವ - ನಿರ್ಮಿತ ವಿಚಾರದ ಬಗ್ಗೆ ತಿಳಿಸಬೇಕು. ವಿದ್ಯಾರ್ಥಿಗಳು ಸಾಮಾಜಿಕ ವಿಚಾರಗಳಾದ ಬಡತನ, ಬಾಲ ಕಾರ್ಮಿಕರು, ಅನಕ್ಷರತೆ, ನಗರ, ಹಳ್ಳಿಗಳಲ್ಲಿ ಜಾತಿಮತಗಳ ಅಸಮಾನತೆಗಳೇ ಮುಂತಾದ ವಿಷಯಗಳನ್ನೂ ತಿಳಿದಿರಬೇಕು. ಪಠ್ಯಾಂಶವು ವಿದ್ಯಾರ್ಥಿಗಳ ಅನುಭವ, ದೈನಂದಿನ ಜೀವನಕ್ಕೆ ಸಂಬಂಧಿಸಿರಬೇಕು.
4.3: ಹಿರಿಯ ಪ್ರಾಥಮಿಕ ಹಂತ: ಉದ್ದೇಶಗಳು:-
* ಮಾನವ ಜನಾಂಗದ ಅಭ್ಯಾಸ (ರೂಢಿ) ವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು.
* ಅವಳ/ಅವನ ಸ್ವಂತ ಸ್ಥಳ, ರಾಜ್ಯ, ರಾಷ್ಟ್ರದ ಬಗ್ಗೆ ಕಲಿಕೆಯನ್ನುಂಟು ಮಾಡಲು ಪ್ರೇರೇಪಿಸುವುದು.
* ಭಾರತದ ಪ್ರಾಚೀನ ವಿಚಾರಗಳನ್ನೂ - ಪ್ರಪಂಚದ ಪ್ರಚಲಿತ ಅಭಿವೃದ್ಧಿಯ ವಿಚಾರಗಳೊಂದಿಗೆ ಹೊಂದಿಸಿ ಕಲಿಯುವಂತೆ ಪ್ರೇರೇಪಿಸುವುದು.
* ಈ ದೇಶದ ಸಾಮಾಜಿಕ, ರಾಜಕೀಯ ಸಂಸ್ಥೆಗಳ ಕಾರ್ಯಗಳನ್ನು ತಿಳಿಸುವುದು.

ಈ ಹಂತದಲ್ಲಿ ವಿದ್ಯಾರ್ಥಿಗಳ ಪಠ್ಯಾಂಶಗಳನ್ನೂ ಚರಿತ್ರೆ, ಭೂಗೋಳ ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರಗಳ ಮೂಲಕ ಆಯ್ದುಕೊಳ್ಳಬೇಕು. ಇದರೊಂದಿಗೆ ಪ್ರಚಲಿತ ಘಟನೆ, ಸಮಸ್ಯೆಗಳನ್ನೂ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು. ಇದರಲ್ಲಿ ಬಡತನ, ಅನಕ್ಷರತೆ, ಬಾಲಕಾರ್ಮಿಕರು, ಜಾತಿ, ಲಿಂಗ ಹಾಗೂ ಪರಿಸರದಂಥ ವಿಷಯಕ್ಕೂ ಮಹತ್ವ ನೀಡಬೇಕು. ಭೂಗೋಳ ಮತ್ತು ಅರ್ಥಶಾಸ್ತ್ರಗಳನ್ನೂ ಒಂದುಗೂಡಿಸಿ ಕಲಿಸುವಲ್ಲಿ ಸ್ಥಳೀಯ ಹಾಗೂ ಭೌಗೋಳಿಕ ವಿಚಾರಗಳ ಬಗ್ಗೆಯೂ ಕಲಿಸಬೇಕು. ಚರಿತ್ರೆಯನ್ನು ಬಹುಮುಖೀಯವಾಗಿ ಕಲಿಸಬೇಕು. ಸ್ಥಳೀಯ, ರಾಜ್ಯ, ಕೇಂದ್ರ , ಮಟ್ಟದಲ್ಲಿನ ಸರ್ಕಾರದ ಕಾರ್ಯಗಳನ್ನೂ, ಪ್ರಜಾಪ್ರಭುತ್ವದಲ್ಲಿನ ಗಣ್ಯ ವ್ಯಕ್ತಿಗಳ ಭಾಗವಹಿಸುವಿಕೆಯ ಬಗ್ಗೆಯೂ ವಿದ್ಯಾರ್ಥಿಗಳಿಗೆ ಪರಿಚಯಿಸಬೇಕು.

**ಪ್ರೌಢ ಶಾಲಾ ಹಂತ** : ಉದ್ದೇಶ : ಇಲ್ಲಿ ಕಲಿಯುವವನಿಗೆ ಪರಿಕಲ್ಪನಾತ್ಮಕ, ವಿಶ್ಲೇಷಣಾತ್ಮಕ ಕೌಶಲಗಳನ್ನು ಅಭಿವೃದ್ಧಿಪಡಿಸಬೇಕು.

- ಆಧುನಿಕ ಹಾಗೂ ಪ್ರಚಲಿತ ಭಾರತದ ಪ್ರಪಂಚದ ಬೇರೆ, ಬೇರೆ ಭಾಗಗಳಲ್ಲಿನ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಯನ್ನೂ ಅರ್ಥ ಮಾಡಿಸುವುದು.

- ಬಡತನ, ಬಾಲ ಕಾರ್ಮಿಕತೆ, ಅನಕ್ಷರತೆ, ಜಾತಿ, ಮತ, ಧರ್ಮ ಲಿಂಗಗಳಲ್ಲಿನ ಅಸಮಾನತೆಗಳ ಬಗ್ಗೆ ವಿಮರ್ಶಾತ್ಮಕವಾಗಿ ವಿಶ್ಲೇಷಿಸುವುದು.
- ಪ್ರಜಾಸತ್ತಾತ್ಮಕ, ಸಮಾಜವಾದಿ ರಾಷ್ಟ್ರದಲ್ಲಿ ಸಮಾಜದ ಹಕ್ಕು ಹಾಗೂ ಜವಾಬ್ದಾರಿಗಳನ್ನು ಅರ್ಥ ಮಾಡಿಸುವುದು
- ರಾಜ್ಯ ಹಾಗೂ ಸಂವಿಧಾನಾತ್ಮಕ ರಿವಾಜುಗಳ ಬಗ್ಗೆ ವಿದ್ಯಾರ್ಥಿಗಳು ತಮ್ಮ ಪಾತ್ರ ಹಾಗೂ ಜವಾಬ್ದಾರಿಗಳನ್ನು ಅರ್ಥ ಮಾಡಿಸುವುದು.
- ಭಾರತ ಹಾಗೂ ಪ್ರಪಂಚಕ್ಕೆ ಸಂಬಂಧಿಸಿದಂತೆ ಆರ್ಥಿಕ ಹಾಗೂ ರಾಜಕೀಯ ವಿಚಾರದ ಬದಲಾವಣೆಯ ಬಗ್ಗೆ ಅರಿವನ್ನುಂಟು ಮಾಡುವುದು.
- ಸ್ಥಳೀಯ ಸಮುದಾಯ ಹಾಗೂ ಪರಿಸರಕ್ಕೆ ಸಂಬಂಧಿಸಿದಂತೆ ಹಕ್ಕುಗಳನ್ನೂ ಪ್ರಶಂಸಿಸುವುದು. ಸಂಪನ್ಮೂಲದ ನ್ಯಾಯಯುತ ಬಳಕೆ ನೈಸರ್ಗಿಕ ಪರಿಸರದ ಉಳಿತಾಯದ ಅಗತ್ಯತೆಗಳ ಹಕ್ಕುಗಳ ಬಗ್ಗೆ ಅಭಿಮಾನಪಡುವಂತೆ ಮಾಡುವುದು.

ಈ ಹಂತದಲ್ಲಿ ಸಾಮಾಜಿಕ ವಿಜ್ಞಾನವು ಚರಿತ್ರೆ, ಭೂಗೋಳ, ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರದೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕಾಗಿದೆ. ಪ್ರಚಲಿತ ಭಾರತದ ಬಗ್ಗೆ ರಾಷ್ಟ್ರದ ಸಾಮಾಜಿಕ. ಆರ್ಥಿಕ ಕ್ಷೇತ್ರದಲ್ಲಿ ದೇಶವು ಎದುರಿಸುವ ಅಹವಾಲುಗಳನ್ನು ಅರ್ಥ ಮಾಡಲು ಪ್ರಯತ್ನಿಸಬೇಕು. ಜ್ಞಾನದ ವರ್ಗಾವಣೆಯಲ್ಲಿ ಪ್ರಚಲಿತ ಭಾರತದ ಆದಿವಾಸಿ, ದಲಿತ ಹಿಂದುಳಿದ ಜನಸಂಖ್ಯೆ ಹಾಗೂ ಪ್ರಚಲಿತ ವಿದ್ಯಾಮಾನಗಳ ಬಗ್ಗೆಯೂ ತಿಳಿಸಬೇಕು.

ಚರಿತ್ರೆಯಲ್ಲಿ ದೇಶದ ಸ್ವಾತಂತ್ರ್ಯ ಹೋರಾಟದ ಅಧ್ಯಯನಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಜನಾಂಗಗಳ ಕೊಡುಗೆ, ಆಧುನಿಕ ಪ್ರಪಂಚದ ಅಭಿವೃದ್ಧಿಗೆ ಸಂಬಂಧಿಸಿದಂತೆ ಆಧುನಿಕ ಚರಿತ್ರೆಯನ್ನಿರಿಸಬೇಕು. ಭೂಗೋಳ ಶಾಸ್ತ್ರದ ವಿಷಯಗಳು – ಪರಿಸರದ ಸದಾ ಬಳಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಮನೋಮಟ್ಟಕ್ಕನುಗುಣವಾದ ವಿಚಾರಗಳನ್ನೂ ಈಗಾಗಲೇ ತಿಳಿಸಬಹುದಾಗಿದೆ. ರಾಜಕೀಯ ವಿಜ್ಞಾನ ಭಾರತದ ಸಂವಿಧಾನ ಚೌಕಟ್ಟಿನ ಹಿನ್ನೆಲೆಯಲ್ಲಿ ತಾತ್ವಿಕ ಆಧಾರಗಳ ಬಗ್ಗೆ ವಿಷಯಗಳನ್ನೂ ಪ್ರತಿಪಾದಿಸಬಹುದಾಗಿದೆ. ಉದಾ:– ಸಮಾನತೆ, ಸೌಹಾರ್ದತೆ, ನ್ಯಾಯ, ವ್ಯಕ್ತಿ ಗೌರವದ ಬಗ್ಗೆ ಆಳವಾದ ಚರ್ಚೆ ಮಾಡಿ, ಅರ್ಥಶಾಸ್ತ್ರದ ಶಿಸ್ತನ್ನೂ ವಿದ್ಯಾರ್ಥಿಗಳಿಗೆ ನೀಡಬಹುದಾಗಿದೆ. ಉದಾ:– ಬಡತನ, ನಿರುದ್ಯೋಗಿಗಳ ಅಂಕಿ ಸಂಖ್ಯೆಗಳನ್ನೂ ಈ ಹಂತದಲ್ಲಿ ತಿಳಿಸುವ ಬದಲು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದ ವಿವಿಧ ಸಂಸ್ಥೆಗಳ ಬಗ್ಗೆ ಹಾಗೂ ಆರ್ಥಿಕ ಸಂಬಂಧಗಳಲ್ಲಿನ ಅಸಮಾನತೆಯ ಬಗ್ಗೆ ತಿಳಿಸಬಹುದು. ಇವುಗಳು ಹೆಚ್ಚು ವಿದ್ಯಾರ್ಥಿಗಳನ್ನೂ ತಟ್ಟುತ್ತದೆ.

ಈ ಹಂತದಲ್ಲಿ ಅಧ್ಯಯನದಲ್ಲಿ ಶಿಸ್ತನ್ನೂ ರೂಪಿಸುವಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಶಿಸ್ತಿನ ಗುಣ, ಗುರಿ, ಪದ್ಧತಿಗಳನ್ನೂ ನೀಡಬಹುದು. ಇವುಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಹಾಯಕವಾಗಬಹುದು. ತನ್ಮೂಲಕ ಆಶಿಸಬಹುದಾದ ಕೌಶಲಗಳನ್ನು ಗಳಿಸಬಹುದಾಗಿದೆ.

**4.4. <u>ಹಿರಿಯ ಪ್ರೌಢ ಹಂತ:</u>** ಹತ್ತು ವರ್ಷಗಳ ಶಾಲಾ ವ್ಯವಸ್ಥೆ ಎಲ್ಲ ವಿದ್ಯಾರ್ಥಿಗಳಿಗೆ ಸಾಮಾನ್ಯ ಮಟ್ಟದ ಶಿಕ್ಷಣಕ್ಕೆ ಮಹತ್ವ ನೀಡುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳ ಅಗತ್ಯ ಆಸಕ್ತಿ, ಅಭಿರುಚಿಗನುಗುಣವಾಗಿ ಶಿಕ್ಷಣವಿರಬೇಕು. ಕೆಲವು ವಿದ್ಯಾರ್ಥಿಗಳಿಗೆ ಈ ಹಂತ. ಔಪಚಾರಿಕ ಶಿಕ್ಷಣದ ಮುಕ್ತಾಯ – ಬಳಿಕ ಅವರು ಉದ್ಯೋಗಕ್ಕೆ ಸೇರುವರು, ಉಳಿದವರಿಗೆ ಉನ್ನತ ಶಿಕ್ಷಣ ಪಡೆಯುವಲ್ಲಿ ಇದೊಂದು ಆಧಾರ. ಅವರು ಮುಂದೆ ಅವರಿಗಿಷ್ಟವಾದ ಶಿಕ್ಷಣದ ಕೋರ್ಸುಗಳಿಗೋ, ವೃತ್ತಿಪರ ಕೋರ್ಸುಗಳಿಗೋ ಸೇರುವರು. ಅವರ ಮುಂಬಾಳಿಗೆ ಮೂಲಭೂತ ಜ್ಞಾನ, ಕೌಶಲಗಳನ್ನೂ ಒದಗಿಸಿ ಅವರ ಆಯ್ಕೆಯ ಬಾಳಿಗೆ ಇದು ಅರ್ಥಪೂರ್ಣ ಕೊಡುಗೆಯನ್ನು ನೀಡುತ್ತದೆ. ಹೀಗಾಗಿ ಈ ಹಂತದಲ್ಲಿ ಅವರು ವೈವಿಧ್ಯಮಯ ಅನುಭವಗಳನ್ನು ಗಳಿಸುವುದು ಅದಕ್ಕಾಗಿ ಸೂಕ್ತ ಯೋಜನೆಯನ್ನು ಹಾಕಿಕೊಳ್ಳಬೇಕು

ಶಿಕ್ಷಕರು ವಿದ್ಯಾರ್ಥಿಗಳಿಗೆ ವೈವಿಧ್ಯಮಯವಾದ ಚಟುವಟಿಕೆಗಳನ್ನು ಕಲಿಕೆಯಲ್ಲಿ ಅಳವಡಿಸಬೇಕು. ಈ ಮೂಲಕ ಅವರು ಜೀವಂತ ಅನುಭವಗಳ ಮೂಲಕ ವಿಷಯವನ್ನೂ ಗ್ರಹಿಸುವರು. ಉದಾ:- ವಿದ್ಯಾರ್ಥಿಯ ಸಹಕಾರ ಚಳುವಳಿಯನ್ನು ಪ್ರಸ್ತುತ ಇರುವ ಸಹಕಾರ ಚಳುವಳಿಯ ಬಗ್ಗೆ ತಿಳಿಸುವುದರ ಮೂಲಕ ಕಲಿಸುವುದು.

( ಇದನ್ನು ಜಾಮಿಯಾ ಶಾಲೆಯಲ್ಲಿ ನಡೆಸಲಾಗುವುದು) ಆದರೆ ಕಲಿಕೆಯ ಸಮಯದಲ್ಲಿ ನಿರ್ದಿಷ್ಟತೆ ಇಲ್ಲ. ಉದಾ:- ಚಂದ್ರ, ಇದರ ಬಗ್ಗೆ ಕಲಿಯುವಲ್ಲಿ ಶಾಲಾ ಸಮಯದಲ್ಲಿ ಶಾಲಾ ಪರಿಸರದಲ್ಲಿ ಸಾಧ್ಯವಿಲ್ಲ. ಅದಕ್ಕೆ ರಾತ್ರಿ ವೇಳೆ ಶಾಲೆಯನ್ನು ತೆರೆಯಬೇಕಾಗಿದೆ.

## ಸ್ಥಳೀಯ ಕರಕುಶಲ ಕಲೆ ಹಾಗೂ ವಸ್ತು ಸಂಗ್ರಹಾಲಯ

ಸಮಾಜವಿಜ್ಞಾನವನ್ನೂ ಸಂತಸದಾಯವೂ ಪರಿಣಾಮಕಾರಿಯಾಗಿಯೂ ಕಲಿಯಬೇಕಾದಲ್ಲಿ ಬೋಧನಾ ಪದ್ಧತಿಯಲ್ಲಿ ಸಂಶೋಧನೆ ನಡೆಯಬೇಕಾಗಿದೆ. ಕಲಿಯುವವನು ಸ್ಥಳೀಯ ವಸ್ತು ಸಂಗ್ರಹಾಲಯ ರಾಜ್ಯ ಜಿಲ್ಲಾ ಮಟ್ಟದ ವಸ್ತು ಸಂಗ್ರಹಾಲಯಕ್ಕೆ ಭೇಟಿಕೊಡಬೇಕು ಪರಿಸರದ ಕರಕುಶಲ ಕಲೆಯಲ್ಲಿ ನಿಷ್ಣಾತರಾದ ಸಮುದಾಯವನ್ನುಭೇಟಿ ಮಾಡಬಹುದು ಅಲ್ಲಿ ಕಲಿತ ವಿಚಾರದ ಕುರಿತು ಶಾಲೆಯ ಒಂದು ಕೋಣದಲ್ಲಿ ಇದನ್ನು ಇಡಬಹುದು .

ಪ್ರತಿ ಶಾಲೆಯು ಸಮಾಜ ವಿಜ್ಞಾನದ ವಸ್ತು ಸಂಗ್ರಹಾಲಯವನ್ನು ಇರಿಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಬೇಸಿಗೆ ರಜೆಯ ವೇಳೆ ಚರಿತ್ರೆಗೆ ಸಂಬಂಧಿಸಿದ ಸ್ಮಾರಕಗಳ ಮಾದರಿ. ಜ್ವಾಲಾಮುಖಿ, ಭೂಕಂಪಗಳ ಬಗ್ಗೆ ತಖ್ತೆ, ಪದಬಂಧ, ರಸಪ್ರಶ್ನೆ ಮುಂತಾದವುಗಳನ್ನು ಪ್ರಾಯೋಗಿಕವಾಗಿ ಮಾಡಿಸಬಹುದು. ವಿದ್ಯಾರ್ಥಿಗಳು ಪರಿಸರವನ್ನು ನೋಡಿ ಚಿತ್ರ ಬಿಡಿಸಬಹುದು. ವಾರಾಪತ್ರಿಕೆ, ಮ್ಯಾಗಜಿನ್ ಗಳ ಚಿತ್ರ, ವಿಷಯಗಳನ್ನು ತುಂಡು ಮಾಡಿ ಆಗಾಗ ಪ್ರದರ್ಶಿಸಬಹುದು (ಅಂತರ್ಜಾಲದಿಂದ ಬಂದ ವಿಷಯಗಳನ್ನೂ) ಹೀಗೆ ಶಾಲೆಗಳಲ್ಲಿಯೂ ವಸ್ತು ಸಂಗ್ರಹಾಲಯಗಳನ್ನು ವಿಭಿನ್ನ ಶೈಲಿಯಲ್ಲಿ ಇರಿಸಬಹುದು.

- ಶಾಲೆಗಳಲ್ಲಿ ಸಮಾಜ ವಿಜ್ಞಾನ ದಿನವನ್ನು ಆಚರಿಸಬಹುದು.
- ವಿದ್ಯಾರ್ಥಿಗಳನ್ನೂ ಹತ್ತಿರದ ಕಲೆ, ಕರ ಕುಶಲ ಕೇಂದ್ರಗಳಿಗೆ ಸಂದರ್ಶನಕ್ಕೆ ಕರೆದುಕೊಂಡು ಹೋಗಬಹುದು.
- ವಿದ್ಯಾರ್ಥಿಗಳಿಗೆ ರಾತ್ರಿ ವೇಳೆ ಆಕಾಶ, ನಕ್ಷತ್ರ, ಚಂದ್ರ - ಸೂರ್ಯೋದಯ, ಸೂರ್ಯಾಸ್ತಗಳನ್ನು ನೋಡಲು ಪ್ರೋತ್ಸಾಹಿಸುವುದರೊಂದಿಗೆ ಹಗಲು ರಾತ್ರಿಯಲ್ಲಿ ಆಗುವ ಪ್ರಾಕೃತಿಕ ಬದಲಾವಣೆ, ಪ್ರಕೃತಿಯ ಪ್ರತಿಯೊಂದು ವೈಶಿಷ್ಟಗಳ ಬಗ್ಗೆ ದಾಖಲೆ ಮಾಡಿಕೊಳ್ಳಲು ಹೇಳಬಹುದು.
- ವಿದ್ಯಾರ್ಥಿಗಳು ಸ್ಥಳೀಯ ಸ್ಮಾರಕಗಳಿಗೆ ಸಂದರ್ಶಿಸಬಹುದು. ಹಾಗೂ ಆ ಸ್ಮಾರಕಗಳನ್ನು ತಮ್ಮ ಪುಸ್ತಕದಲ್ಲಿ ಚಿತ್ರಿಸಬಹುದು. ಅವುಗಳ ಬಗ್ಗೆ ಲೇಖನಗಳನ್ನು ಬರೆಯಬಹುದು. ಇವುಗಳನ್ನು ಶಾಲೆಗಳಲ್ಲಿ ಪ್ರದರ್ಶಿಸಬಹುದು.

ಈ ಹಂತದಲ್ಲಿ ವಿದ್ಯಾರ್ಥಿಗಳಿಗೆ ಮುಂದಿನ ಹಂತಕ್ಕೆ ಕೊಂಡಿಯಾಗಿ, ಶಿಕ್ಷಣವನ್ನು ರೂಪಿಸಬೇಕಾಗಿದೆ. ವಿದ್ಯಾರ್ಥಿಗಳು ತಮ್ಮ ಗುರಿಯನ್ನು ಸ್ವೀಕರಿಸುವಲ್ಲಿ ಅವರ ಸಾಧನೆಗಳ ಹೆಜ್ಜೆಗಳನ್ನು ನಿರ್ಲಕ್ಷಿಸುವಂತಿಲ್ಲ. ಅವರ ಅಗತ್ಯಗಳನ್ನು ಅದರ ವಿಭಿನ್ನ ಪ್ರಾದೇಶಿಕ, ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆಗಳನ್ನು ಎಚ್ಚರಿಕೆಯಿಂದ ಗಮನಿಸಬೇಕು.

ನಮ್ಮ ರಾಷ್ಟ್ರೀಯ ಮಟ್ಟದಲ್ಲಿಯೂ ಈ ಶಿಕ್ಷಣದ ಸವಾಲುಗಳನ್ನು ತಲುಪಲು ವೈವಿಧ್ಯಮಯವಾದ ಕೋರ್ಸುಗಳು ಪಠ್ಯಕ್ರಮದ ಫಲ ಶ್ರುತಿಗನುಗುಣವಾಗಿ ಬೋಧನಾ ಸಾಮಗ್ರಿ, ದೃಕ್ ಶ್ರವಣ ಸಾಧನ, ಬಹುಮಾಧ್ಯಮ ಸಾಧನಗಳನ್ನು ಪ್ರಾಪಂಚಿಕವಾಗಿ ಸ್ಪರ್ಧಾತ್ಮಕ ದೃಷ್ಟಿಯಿಂದ ಸಂರಚನೆಗೊಂಡಿದೆ.

ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ ಹಾಗೂ ವಾಣಿಜ್ಯ ಶಾಸ್ತ್ರಕ್ಕೆ ಸಂಬಂಧಿಸಿದಂತೆ ಅವರವರ ಇಷ್ಟಾನುಸಕ್ತಿ ಕೋರ್ಸುಗಳನ್ನು ಇರಿಸಬೇಕು. ಈ ಹಂತದಲ್ಲಿ ಸಮಾಜ ವಿಜ್ಞಾನವು ರಾಜಕೀಯ ವಿಜ್ಞಾನ, ಭೂಗೋಳ, ಚರಿತ್ರೆ, ಅರ್ಥಶಾಸ್ತ್ರ, ಮನೋವಿಜ್ಞಾನ, ವಾಣಿಜ್ಯ ಶಾಸ್ತ್ರ, ವ್ಯವಹಾರಿಕ ಅಧ್ಯಯನ ಹಾಗೂ ಅಕೌಂಟೆನ್ಸಿಯು 'ಶಿಸ್ತಿ' ಗೆ ಒಳಪಟ್ಟಿದೆ.

ಈ ಹಂತದಲ್ಲಿ ಸಮಾಜ ವಿಜ್ಞಾನದ ಗುರಿಗಳು : –

*ವಿದ್ಯಾರ್ಥಿಗಳಿಗೆ ಅವರವರ ಆಸಕ್ತಿ, ಅಭಿರುಚಿಗಳಿಗನುಸಾರವಾಗಿ ಸೂಕ್ತವಾದ ವಿಶ್ವವಿದ್ಯಾನಿಲಯದ ಮೂಲಕ ಕೋರ್ಸುಗಳನ್ನು ಸಂಶೋಧನೆಗೆ ಸಹಾಯ ಮಾಡುವುದು.

* ವಿದ್ಯಾರ್ಥಿಗಳಿಗೆ ಬೇರೆ ಬೇರೆ ಶಿಸ್ತಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಜ್ಞಾನವನ್ನು ಪಡೆಯಲು ಪ್ರೋತ್ಸಾಹಿಸುವುದು.

*ನಾಳಿನ ನಾಗರಿಕರಾದ ವಿದ್ಯಾರ್ಥಿಗಳಲ್ಲಿ ಸಮಸ್ಯಾ ಪರಿಹಾರ ಸಾಮರ್ಥ್ಯ ಹಾಗೂ ಸೃಜನಶೀಲ ಯೋಚನೆಗೆ ಪ್ರೋತ್ಸಾಹಿಸುವುದು.

*ವಿದ್ಯಾರ್ಥಿಗಳಿಗೆ ಬೇರೆ ಬೇರೆ ರೀತಿಯಲ್ಲಿ ನಿರ್ದಿಷ್ಟ ಶಿಸ್ತಿಗೆ ಸಂಬಂಧಿಸಿದಂತೆ ಅಂಕಿ ಅಂಶಗಳ ದಾಖಲೆಗಳ ಸಂಗ್ರಹ ಮಾಡಿಸುವುದು. ಕೊನೆಯಲ್ಲಿ ಎಲ್ಲಾ ವಿಷಯಗಳನ್ನು ಕ್ರೋಢೀಕರಿಸಿ ಹೊಸ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವಂತೆ ಮಾಡುವುದು.

**5. ಬೋಧನಾ ಮಾರ್ಗಗಳು:**

ಸಮಾಜ ವಿಜ್ಞಾನ ಬೋಧನೆಯನ್ನು ಪರಿಸರದ ಪರಸ್ಪರ ಸಂಬಂಧದ ಕುರಿತು ವಿದ್ಯಾರ್ಥಿಗಳಿಗೆ ಜ್ಞಾನ, ಕೌಶಲದ ಬಗ್ಗೆ ಅಗತ್ಯವಾಗಿ ಪರಿಶೀಲನೆಗೊಳಪಡಿಸಬೇಕಾಗಿದೆ. ಸಮಾಜ ವಿಜ್ಞಾನದ ವಿದ್ಯಾರ್ಥಿಗಳಿಗೆ ನೀಡಬೇಕಾದ ಪಠ್ಯಕ್ರಮಕ್ಕೂ – ಗ್ರಹಿಕೆಗೂ ಅಂತರವನ್ನು ಮನಗಾಣಬಹುದು. ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರ ಬೋಧನೆಯು ಇನ್ನಷ್ಟು ಸಂಶೋಧನಾತ್ಮಾಕವೂ, ಸೃಜನಶೀಲವಾಗಬೇಕಾಗಿದೆ.

- ಶಿಕ್ಷಕರು ವಿಷಯವನ್ನು ಕಲಿಸುವಲ್ಲಿ ವಿದ್ಯಾರ್ಥಿಗಳಿಗೆ ಅದನ್ನು ಬೋಧಿಸಬೇಕಾಗಿದೆ. ಹೀಗಾಗಿ ಶಿಕ್ಷಣವನ್ನು ಕಲಿಸುವಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಒಟ್ಟಾಗಬೇಕಾಗಿದೆ. ಸಂಸ್ಥೆಯಲ್ಲಿ ಪ್ರಜಾಸತ್ತಾತ್ಮಕ ಸಂಸ್ಕೃತಿಯನ್ನು ಬೆಳೆಸಬೇಕಾಗಿದೆ. ವಿದ್ಯಾರ್ಥಿಗಳನ್ನು ಸಕ್ರಿಯವಾಗಿ ಭಾಗಿಯಾಗುವಂತೆ ಮಾಡುವಲ್ಲಿ ಚರ್ಚೆ ಹಾಗೂ ವಿಚಾರ ವಿನಿಮಯಗಳಂಥ ಚಟುವಟಿಕೆಗಳನ್ನು ನಡೆಸಬೇಕಾಗಿದೆ. ಸಾಮಾಜಿಕ ಸಂಬಂಧಗಳನ್ನು ಜೀವಂತವಾಗಿಸುವಲ್ಲಿ ಕಲಿಕೆ, ಬೋಧನಾ ಕ್ರಮ ಪರಿಣಾಮಕಾರಿಯಾಗಬೇಕಾಗಿದೆ.

- ವ್ಯಕ್ತಿ ಹಾಗೂ ಸಮುದಾಯಕ್ಕೆ ಸಂಬಂಧಿಸಿದ ಪರಿಕಲ್ಪನೆಗಳನ್ನು ಜೀವಂತ ಅನುಭವಗಳನ್ನು ನೀಡುವುದರ ಮೂಲಕ ಸ್ಪಷ್ಟಗೊಳಿಸಬೇಕು. ಉದಾ: ಸಾಮಾಜಿಕ ಸಮಾನತೆಯ ಪರಿಕಲ್ಪನೆಯನ್ನು ಮಗುವಿಗೆ ಸಾಮಾಜಿಕಾ ಸಾಂಸ್ಕೃತಿಕ ವಾತಾವರಣದ ಮೂಲಕ ಸಮುದಾಯದ ಜೀವಂತ ಅನುಭವಗಳನ್ನು ನೀಡಬೇಕಾಗಿದೆ. ಇಲ್ಲಿ ತರಗತಿಯ ಪರಿಸರಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳ ಸಾಂಸ್ಕೃತಿಕ, ಸಾಮಾಜಿಕ ಜಾತಿಮತಗಳ ಭಿನ್ನತೆಯನ್ನು ಗಮನಿಸಬೇಕು. ಹೀಗಾಗಿ ತರಗತಿಯ ಬೋಧನೆ ಮುಕ್ತತೆಯನನನನನ್ನೊಳಗೊಂಡಿದೆ. ಶಿಕ್ಷಕರು ತರಗತಿಯಲ್ಲಿ ಸಾಮಾಜಿಕ ಸತ್ಯದ ವಿವಿಧ ಮುಖಗಳನ್ನೂ ವಿದ್ಯಾರ್ಥಿಗಳಲ್ಲಿ ಮೂಡಿಸುವಲ್ಲಿ ಚರ್ಚಿಸಬೇಕಾಗಿದೆ.

- ಶಿಕ್ಷಕರು ಪಠ್ಯಪುಸ್ತಕಕ್ಕೆ ಪೂರಕವಾದ ಮಾಧ್ಯಮಗಳನ್ನು ಬಳಸಬೇಕಾಗಿದೆ. ಇದು ವಿದ್ಯಾರ್ಥಿಗಳಿಗೆ ವಿವಿಧ ಚಟುವಟಿಕೆ, ಯೋಜನೆಗಳನ್ನು ರೂಪಿಸುವಲ್ಲಿ ನೆರವಾಗುತ್ತದೆ. ನಿರ್ದಿಷ್ಟವಾದ ಪಠ್ಯವಸ್ತುವಿಗೆ ಅಸಂಖ್ಯಾ, ಸಾಂಸ್ಕೃತಿಕ, ಸ್ಥಳೀಯ ಆಕರಗಳನ್ನು ಸೇರಿಸಿ ಕಲಿಸಬೇಕಾದ ಅಗತ್ಯವು ಕಂಡು ಬರುತ್ತದೆ. ಇದು ಬೋಧನೆಗೆ – ಕಲಿಕೆಗೆ ಇನ್ನಷ್ಟು ವಿಷಯಗಳನ್ನು ಒದಗಿಸುತ್ತದೆ.

- ಎನ್.ಎಫ್.ಜಿ. ಶಿಸ್ತನ್ನು ಕಲಿಸುವಲ್ಲಿ ಶಾಲೆಯ ಶಿಕ್ಷಕರ ಆಂತರಿಕ ಚಟುವಟಿಕೆ ಹಾಗೂ ಕಡಿಮೆ ಮಟ್ಟದ ಪ್ರಜ್ಞತೆಯನ್ನು ಮನಗಂಡಿದೆ. ಆಂತರಿಕ ಚೌಕಟ್ಟು, ಹಾಗೂ ಸ.ವಿಜ್ಞಾನ ಬೋಧನೆಯ ನಡುವೆಯ ಕೊಂಡಿಗಳ ಬಗ್ಗೆ ಹೆಚ್ಚೇನೂ ತದ್ಧಿರುದ್ಧವಾದ ಹೇಳಿಕೆಗಳನ್ನು ಇದು ನೀಡಲಿಲ್ಲ. ಯಾಕೆಂದರೆ ಸಮಾಜ ವಿಜ್ಞಾನ ಪ್ರಯೋಗಾಲಯಗಳು ಇಂದು ಬೋಧನೆಗೆ ಪೂರಕವಾಗಿದೆ. ಹೇಗಿದ್ದರೂ ಸಮಾಜ ವಿಜ್ಞಾನ ಬೋಧನೆಯು ಪರಿಣಾಮಕಾರಿಯಾಗುವಲ್ಲಿ ಗ್ರಂಥಾಲಯಗಳು ಹೆಚ್ಚು ಪ್ರಬಲ ಮಾಧ್ಯಮಗಳಾಗಿವೆ. ಇದರೊಂದಿಗೆ ಯೋಜನೆ, ಚಟುವಟಿಕೆಗಳನ್ನು

ನಿರೂಪಿಸುವುದರಿಂದ, ಬೋಧನೆ ಹೆಚ್ಚು ಕಾರ್ಯಗತವಾಗುತ್ತದೆ. ಯೋಜನೆ ಎಂಬುದು ಕೇವಲ ಬರವಣಿಗೆಯಲ್ಲಿ ಬದಲಿಗೆ ವಿದ್ಯಾರ್ಥಿಗಳು ಅದನ್ನು ಅರ್ಥಮಾಡಿಕೊಂಡು ಬರೆಯಬೇಕು. ಇದು ಆಂತರಿಕ ಕಾರ್ಯವೆಂದು ಹೆತ್ತವರಿಗೊಂದು ಕೆಲಸವಾಗಿದೆ ಮಕ್ಕಳಿಗಲ್ಲ, ಇದು ಸುಲಭದಲ್ಲಿ ಅಂಕ ಪಡೆಯುವ ಸಾಧನೆ ಕೂಡ.

- **5.1 : <u>ಶಿಕ್ಷಕರ ತರಬೇತಿ</u>:** ಸಮಾಜ ವಿಜ್ಞಾನ ಬೋಧನೆ ಪರಿಣಾಮಕಾರಿಯಾಗದಿರುವಲ್ಲಿ ಶಿಕ್ಷಕರ ತರಬೇತಿಯಲ್ಲಿನ ಕೊರತೆಯೂ ಕಾರಣವಾಗಿದೆ. ಪೂರ್ವ ಸೇವಾ ತರಬೇತಿಯ ಪಠ್ಯ ಕ್ರಮದಲ್ಲಿ ಸೇವಾವಧಿ ತರಬೇತಿ ಸಂದರ್ಭದಲ್ಲಿಯೂ ಈ ಬಗ್ಗೆ ಗಮನಹರಿಸಬೇಕಾಗಿದೆ. ಸೇವಾವಧಿ ತರಬೇತಿ ವೇಳೆ ಇದಕ್ಕೆ ಸೂಕ್ತ ಆರ್ಥಿಕ ಹಾಗೂ ನ್ಯಾಯಕವಾದ ಪ್ರೋತ್ಸಾಹ ನೀಡಬೇಕಾಗಿದೆ. ಇದರಿಂದ ಶಿಕ್ಷಕರು ವಿಷಯವನ್ನು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ. ವಿವಿಧ ಶಿಸ್ತಿಗೆ ಸಂಬಂಧಿಸಿದಂತೆ ಸಮಾಜ ವಿಜ್ಞಾನದ ಪಠ್ಯಪುಸ್ತಕಕ್ಕೆ ಕೈಪಿಡಿಯನ್ನು ಕಡ್ಡಾಯವಾಗಿ ಬಳಸಬೇಕು. ಪಠ್ಯಪುಸ್ತಕ – ಬೋಧನೆಯ ಒಂದು ಅಕರವಷ್ಟೇ– ಸ್ವ– ವ್ಯಕ್ತಿತ್ವ ಬೆಳೆಸಲು ಬೋಧನಾವಧಿ ಹಾಗೂ ತರಬೇತಿ ವೇಳೆ ಸೂಕ್ತ ಮಾರ್ಗದರ್ಶನ ನೀಡಬೇಕಾಗಿದೆ. ಸೇವಾವಧಿ ಹಾಗೂ ನಿಕಟಸೇವಾ ಪೂರ್ವಾವಧಿ ವೇಳೆ ಸಮಾಜವಿಜ್ಞಾನ ಬೋಧನೆಯ ಪರಿಣಾಮಕಾರಿತ್ವಕ್ಕೂ ಹೆಚ್ಚಿನ ಮಾನ್ಯತೆ ನೀಡಬೇಕಾಗಿದೆ.

5.2 <u>ಬೋಧನಾ ಕಲಿಕಾ ಸಾಮಗ್ರಿ</u> : ಈ ಕೆಳಗಿನ ವಿಷಯಗಳು ಬೋಧನಾ ಕಲಿಕಾ ಸಾಮಾಗ್ರಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಸಹಾಯಕವಾಗುತ್ತದೆ.
* ಸಮಾಜ ವಿಜ್ಞಾನದ ವಿವಿಧ ಉಪಾಂಗಗಳಿಗೆ ಸಂಬಂಧಿಸಿದಂತೆ ಬೋಧನಾ ವೇಳಾ ಪಟ್ಟಿ ಹಾಗೂ ಅಂಶಗಳನ್ನು ಸಮಾನವಾಗಿ ಹಂಚಬೇಕಾಗಿದೆ.
* ವಿವಿಧ ಶಿಸ್ತುಗಳ ವಸ್ತುವನ್ನು ವಿದ್ಯಾರ್ಥಿಗಳಿಗೆ ನೀಡುವಲ್ಲಿ (ಹಂಚುವಲ್ಲಿ) ಒಂದು ಸಮಾತೋಲನ ಸ್ಥಿತಿಯನ್ನು ಕಾಪಾಡಬೇಕು, ಸಾಧ್ಯವಾದೆಡೆ ಅವುಗಳೊಂದಿಗೆ ಆಂತರಿಕ ಸಂಬಂಧಗಳನ್ನು ಗುರುತಿಸಬೇಕು.
* ವಿಷಯವನ್ನು ಅದರ ಸಂದರ್ಭಾನುಸಾರ, ನ್ಯಾಯಿಕವಾಗಿ ಹೊಂದಿಸಬೇಕು.

ಈ ನಿಯಮವನ್ನು ಇಡಿ ಪಠ್ಯಕ್ರಮವಾದುದ್ದಕ್ಕೂ ನಿರ್ವಹಿಸಬೇಕಾಗಿದೆ.

- ಪಠ್ಯಪುಸ್ತಕ ತಯಾರಿಯಲ್ಲಿ ವಿವಿಧ ವಿಭಾಗಕ್ಕೆ ಸಂಬಂಧಿಸಿದಂತೆ ಒಂದೇ ಲೆಕ್ಕದಲ್ಲಿ ಘಟಕಗಳನ್ನಿಡಬೇಕು.
- ಪ್ರತಿ ಘಟಕದ ವಿಷಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಕೋಶ, ಪರಿವಿಡಿ ಆಕರಗ್ರಂಥಗಳ ಪಟ್ಟಿ ಇರಬೇಕು.
- ಪಠ್ಯಪುಸ್ತಕದ ಪ್ರಕಟಣೆಗೆ ಮೊದಲು ಅದರಲ್ಲಿ ಲಿಂಗ ತಾರತಮ್ಯ, ಸಾಮಾಜಿಕ ಸ್ಥಾನಮಾನಗಳ ತಾರತಮ್ಯವಿರದಂತೆ ನೋಡಿಕೊಳ್ಳಬೇಕು.
- ಪಠ್ಯಪುಸ್ತಕದ ಪ್ರಕಟಣೆಗೆ ಮೊದಲು ಎಲ್ಲಿಯೂ, ಯಾವುದೂ ಪುನರಾವರ್ತನೆಯಾಗದಂತೆ ಸಮಾನ ಶೈಲಿಯಲ್ಲಿ ಇರುವಂತೆ ನೋಡಿಕೊಳ್ಳಬೇಕು.

******